Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 27] ಬುಧವಾರ 29—10—47 [ಬಿಡಿ ಪ್ರತಿ ಸೈ

Doc-13 T-P-V

ಹೈದರಾಬಾದು ಸ್ವತಂತ್ರವಾಗಿರಲಿ

ಹೈದರಾಬಾದು ಅ 27 — 'ಹೈದರಾಬಾದು ಸ್ವತಂತ್ರವಾಗಿರಲಿ' 'ನಾವು ಗುಲಾಮರಾಗಿರುವುದಿಲ್ಲ' ಎಂದು ಘೋಷಣೆ ಕೂಗುತ್ತ, ಮುಸ್ಲಿಂರ ಭಾರಿ ಗುಂಪೊಂದು ಈಪ್ರಾತಃಕಾಲ ಹೈದರಾಬಾದು ಮುಖ್ಯಮಂತ್ರಿಗಳೂ ಹೈದರಾಬಾದು ಭಾರತ ಯೂನಿಯನ್ನಿಗೆ ಸೇರುವ ಬಗ್ಗೆಯ ಸಂಧಾದಾ ಸಮಿತಿ ಅಧ್ಯಕ್ಷರೂ ಆದ ಜತ್ತಾರಿ ನವಾಬರ ವಾಸಸ್ಥಾನಕ್ಕೆ ಹೋಯಿತು. ಈ ದಿನ 9 ಘಂಟೆಗ ಇಂಡಿಯಾ ಡೊಮಿನಿಯನ್ನಿಗೆ ಸೇರಿದ ಒಂದು ವರ್ಷ ಸಂಬಂಧ ವಿಟ್ಟುಕೊಳ್ಳುವ ಕರಡು ಒಪ್ಪಂದದ ಪ್ರತಿಯೊಂದಿಗೆ ಪ್ರಧಾನಿ ದೆಹಲಿ ಹೋಗುವರಿದ್ದರು. ಆದರೆ ಸಿ ಪ್ರದರ್ಶನದ ಫಲವಾಗಿ ತಮ್ಮ ಪ್ರಯಾಣ ದಿನವನ್ನು ಮುಂದಕ್ಕೆ ಹಾಕಿದರು.

ಖದ್ದರು ಸಿಗದ ಪಕ್ಷದಲ್ಲಿ ಗೋಣಿ ಚೀಲಗಳನ್ನಾದರೂ ಉಟ್ಟುಕೊಳ್ಳಿ ವೆಯೇಶಿವಸ್ತ್ರಗಳನ್ನು ಸೋಕಬಾರದು.

ಎಚ್ ಸಿ ಕೇಲ್ಕರ್

Latest

ಕ್ರಾಫರ್ಡ್ ಸೆನೇಡು ಮಂದಿರದಲ್ಲಿ ಈ ದಿವಸ ವಿದ್ಯಾರ್ಥಿಗಳು ಅರ್ಪಿಸಿದ ಬಿನ್ನಪತ್ರಕ್ಕೆಗೆ ಉತ್ತರವನ್ನಿತ್ತ, ಪ್ರಧಾನಿ ಶ್ರೀ ಕೆ. ಸಿ. ರೆಡ್ಡಿಯವರು ಒಂದಾತನಾಡುತ್ತಾ, ಎರಡು ತಿಂಗಳ ರಜೆಯಿಂ ಮನ್ನಾ ಆಗಬಹುದೆಂದೂ, ಜೀನಾಯಿಕ ಉಪಸ್ಥಾನಪತಿಗಳು ನಿಮ್ಮಲ್ಲೇ ಹಲವನ್ನು ಆಗಬಹುದಿರಿದೂ, ರಚನಾತ್ಮಕ ಕಾರ್ಯ ಪಿಡೆ ವಿದ್ಯಾರ್ಥಿಗಳು ಗಮನಕೊಡಬೇಕೆಂದೂ ತಿಳಿಸಿದರು. ಅಸಂಖ್ಯಾತ್ಯ ಜನ ಸೇರಿದ್ದರು

ಬೆಂಗಳೂರು ಇಂಟರ್ಮೀಡಿಯೇಟ್ ಕಾಲೇಜಿಗೆ ನೂತನ ಮಂತ್ರಿಗಳು ನಾರೆ ೩ ಸಂಜೆಗೆ ಭೇಟಿ ಕೊಡುವರೆಂದು ತಿಳಿಯಬಂದಿದೆ.

ವಿವಿಧ ವರ್ತಮಾನ

ಕರಾಚಿ ಅ28— ಕಾಶ್ಮೀರ ಭಾರತ ಡೊಮಿನಿಯನ್ನಿಗೆ ಸೇರಿದ ಬಗ್ಗೆ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹೇಳಿಕೆ ಕೊಡುವುದಿಲ್ಲವೆಂತೆ

ಂ ಂ

ಕರಾಚಿ— ಸಿಂದ್ ಸರಕಾರವು 3 ದಿನಪತ್ರಿಕೆಗಳ ಪ್ರಕಟಣೆಯನ್ನು ನಿರ್ಬಂಧಿಸಿದೆ.

ಂ ಂ

ಕೋಲಾರ ಚಿದ್ದಿದ ಗಣಿಯ ಜಂಡ ಮಾಲಿಗಳ ಮುಷ್ಕರ ನಿಂತಿತು.

ಂ ಂ

ನವದೆಹಲಿ ಅ 28— ಕಾಶ್ಮೀರದಲ್ಲಿ ಭಾರತ ಸೈನಿಕರು ಧರಿಗಾರರನ್ನು ಎದುರಿಸಿದರು

ಂ ಂ

ಲಂಡನ್ನಿನಲ್ಲಿ ವಯಕನಾಡುತ್ತಾ, ಕ್ಯಾ ॥ ಕರಿಯಪ್ಪನವರು, ಭಾರತಕ್ಕೆ ಈಗ ಶಾಂತಿ ಸೈದ್ಯ ಪ್ರಯೋಜನವಿಲ್ಲವೆಂದೂ ಬಟನಾದ ಸೈನ್ಯ ಅವಶ್ಯಕವೆಂದು ತಿಳಿಸಿದರು

ಈ ಪಶುಗಳಿಗೆ ಬಿಳಿಯ ಖದ್ದರ್ ಅಂದರೆ ಗಾಬರಿ

ಸಾಧಾರಣವಾಗಿ ಹಳ್ಳಿ ಹಸುಗಳಿಗೆ ಕೆಂಪು ಒಣ್ಣವನ್ನು ಕಂಡರೆ ಹೆದರಿಕೆ : ಹುಚ್ಚಾಬಟ್ಟೆ ಓಡಲಾರಂಭಿಸುತ್ತವೆ. ಅದು ಪಶುವಿನ ಲಕ್ಷಣ. ಆದರೆ ನೈಜಾಂ ಸಂಸ್ಥಾನದಲ್ಲಿಯು ಅಮೂರಚಿಂತ ಆತ್ಮಕೂರಿನ ಪಶುವಿಗೆ ಬಿಳೀ ಖದ್ದರನ್ನು ಕಂಡರೆ ಹೆದರಿಕೆ. ಹಿಂದೆ ಬ್ರಿಟೀಷು ಉದ್ಯೋಗವರ್ಗಕ್ಕೆ ಕೂಡ ಈ ಜಾಡ್ಯವೇ ಇತ್ತು. ಅದು ಈಗ ನೈಜಾಂ ಸಂಸ್ಥಾನಕ್ಕೆ ಬಂದಿದೆ! ಇದೇ ಪತನ ಲಕ್ಷಣಕ್ಕೆ ಪ್ರಾರಂಭ : ಕೆಡುವ ಕಾಲಕ್ಕೆ ಬುದ್ಧಿಯು ಬದಲಾಯಿಸುವುದು ಸಹಜವೇ ಸಂ! 'ವಿನಾಶಕಾಲೇ ವಿಪರೀತ ಬುದ್ಧಿ' ಎಂದು ಹಿರಿಯರು ಹೇಳುವರಷ್ಟೆ! (ಜ್ವಾ)

ಂ ಂ

ಬಿಸಲಿನಿಂದ ಬೆಳೆ

ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾಲಯದ ಸಂಶೋಧನಾಲಯದಲ್ಲಿ ಗಿಡಗಳು ಸೂರ್ಯನ ಬಿಸಲಿನಲ್ಲಿರುವ ಜೈವಿಕ ಸ್ಯ ಶಕ್ತಿಯನ್ನು ಹೇಗೆ ಹೀರಿಕೊಳ್ಳುತ್ತವೆಂಬುದನ್ನು ಕಂಡುಹಿಡಿಯುವ ಪ್ರಯೋಗಗಳಾಗುತ್ತಿವೆ. ಈ ರಹಸ್ಯವು ದಿಕೆಯಿತೆಂದರೆ ಜಗತ್ತು ಮುಂದೆ ಆಹಾರಾಭಾವದ ಸಂಕಷ್ಟದಿಂದ ಪಾರಾಗುವುದು. ಸೂರ್ಯನಲ್ಲಿರುವ ಅಗಾಧ ಶಕ್ತಿಯನ್ನು ಸಂಪೂರ್ಣವಾಗಿ ಹೀರಿಕೊಳ್ಳುವ ವ್ಯವಸ್ಥೆ ಸಸ್ಯಗಳಲ್ಲಿಲ್ಲ. ಅವು ಈಗ ಕೇವಲ ಅದರ ಶೇಕಡಾ 10 ರಿಂದ 20 ರಷ್ಟನ್ನು ಮಾತ್ರ ಹೀರಬಲ್ಲವು. ಈಗ ಸಸ್ಯಗಳು ಹೆಚ್ಚಿಚ್ಚಿನ ಸೂರ್ಯ ಶಕ್ತಿಯನ್ನು ಗ್ರಹಿಸಲು ಸಾಧ್ಯವಾಗುವಂತೆ ಮಾಡುವ ಒಂದು ಏರ್ಪಾನವು ಕಂಡುಹಿಡಿಯಲ್ಪಟ್ಟರೆ ಸಮ್ಮ ಗದ್ದೆ ತೋಟಗಳೂ ತೋಟ ತೀರಗಳೂ ಸಮೃದ್ಧಿಯಾದ ಫಲ ವಸ್ತುಗಳಿಂದ ತುಂಬಿಕುಳು ಕುಮಂತ್ರಾಗುವುವು (ಕೂ)

—

ಹೈದರಾಬಾದು ಅ 25 — ಸದಾತಿನ ಪೇಟೆಯ ಕೋಮುವಾರ್ಗಲಭೆಯಲ್ಲಿ ಇಬ್ಬರು ಸತ್ತರು, 65 ಅಂಗಡಿಗಳು ಸುಡಲ್ಪಟ್ಟವು.

ಂ ಂ

ಲೇಕ್ ಸಸೆಕ್ಸ್ ದ 26—ವಿಶ್ವ ಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ರಷ್ಯ ಮತ್ತು ಜೈನಾ ಪ್ರತಿನಿಧಿಗಳು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗೆ ಆಗುತ್ತಿರುವ ಹಿಂಸೆಯನ್ನು ಖಂಡಿಸಿದರು.

ನೂತನ ಮಂತ್ರಿಗಳ ಪ್ರಮಾಣ ಸ್ವೀಕಾರ

ಮೈಸೂರು, ಅ 29

ನಗರ ಕಾಂಗ್ರೆಸ್ ಕಛೇರಿ ಭವನದ ಮುಂದೆ ಈ ಪ್ರಾತಃಕಾಲದಿಂದಲೇ ಜನ ಸೇರಲು ಆರಂಭಿಸಿದರು.

9 ಗಂಟೆ ವೇಳೆಗೆ ನೂತನ ಸಚಿವರುಗಳು ಕಛೇರಿಗೆ ಆಗಮಿಸಿದರು.

ಮಿಸ್ಸಿಂಲೀಗ್ ವಸತಿಯಿಂದ ಬಂದಿರುವ ಮಂತ್ರಿ ಜ ॥ ಮಹ್ಮದ್ ಷರೀಫ್ ಆಗಮಿಸಿರಲಿಲ್ಲ

ಕಾಂಗ್ರೆಸ್ ಮಂತ್ರಿಗಳೆಲ್ಲರೂ ಖಾದಿ ಧಾರಿಗಳಾಗಿದ್ದರು. ಶ್ರೀ ಚನ್ನಿಗರಾಮಯ್ಯನವರು ಮಾತ್ರ ಉದ್ದನೆಯ ಅಂಗಿಯನ್ನು ಧರಿಸಿದ್ದರು. ಶ್ರೀಗಳಾದ ಸುಬ್ಬಾಮ ಶೆಟ್ಟರು, ಚಂದ್ರಶೇಖರಯ್ಯನರು ದರ್ಬಾರು ದಿರುಸನ್ನು ಧರಿಸಿದ್ದರು.

ಶ್ರೀ ಕೆ. ಸಿ. ರೆಡ್ಡಿಯವರು ಮೊದಲೇ ಶ್ರೀಗಳಾದ ಚನ್ನಿಗರಾಮ, ಚಂದ್ರಶೇಖರಯ್ಯ, ಸುಬ್ಬಾಮಶೆಟ್ಟರುಗಳನ್ನು ಪ್ರಜೆಗಳಿಗೆ ಪರಿಚಯ ಮಾಡಿಕೊಟ್ಟರು.

ಮಂತ್ರಿಗಳ ಮೇಲೆ ಪುಷ್ಪವೃಷ್ಟಿ ಕರೆಯಲಾಯಿತು.

ಮೋಟಾರು ವಾಹನದಲ್ಲಿ ಮಂತ್ರಿಗಳು ಅರಮನೆ ಅಭಿಮುಖವಾಗಿ ಹೊರಟರು ಪ್ರಜೆಗಳು ಹಿಂಬಾಲಿಸಿದರು

ಮಂತ್ರಿಗಳು ಕೋಟೆ ಪ್ರವೇಶಿಸಕೂಡಲೇ ಪ್ರಜೆಗಳು ಜೈಘೋಷ ಮಾಡಿದರು

10—30 ಗಂಟೆಗೆ ರಾಜಭಕ್ತಿ ಪ್ರಮಾಣ ಸ್ವೀಕಾರ ಸಮಾರಂಭ ಶೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ, ಅರಮನೆ ವಿಲಾಸದಲ್ಲಿ ಜರುಗಿತು

ಮಂತ್ರಿಗಳು ಮಹಾಸ್ವಾಮಿಗಳನ್ನು ಭೇಟಿ ಮಾಡಿದರು

ಅರಮನೆಯಿಂದ ಮಂತ್ರಿಗಳು ಪಾಪ ನಾದಾಗ ಪ್ರಜೆಗಳು ಜೈಘೋಷ ಮಾಡಿದರು

ಸಭೆ

ಮೈಸೂರು, ಅ 29

ನೂತನ ಮಂತ್ರಿಗಳಿಗೆ ವಿದ್ಯಾರ್ಥಿ ಕಾಂಗ್ರೆಸ್ ಈ ದಿನ ೪ ಗಂಟೆಯಲ್ಲಿ ಕ್ರಾಫರ್ಡ್ ಮಂದಿರದಲ್ಲಿ ಸ್ವಾಗತಸಮಾರಂಭವನ್ನೇರ್ಪಡಿಸಿತ್ತು

ಮೈಸೂರು ಅ 29—ಶ್ರೀಮನ್ಮಹಾರಾಜರವರ ವರ್ಧಂತಿ ಫುಟ್‌ಬಾಲ್ ಪಂದ್ಯವು ನವೆಂಬರ್ 5 ರಿಂದ ಪ್ರಾರಂಭವಾಗುವುದು.

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರ ಕ ಟ ಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತ್ತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿಕೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ರೀತ್ಯಾ ಕಾರ್ಯಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎಸ್. ಎಸ್. ಹಿರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

ಪ್ರ ಕ ಟ ಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿದ್ದಾಗ್ಯೂ ಸಹಾ ಮಾಲೀಕರುಗಳು ತಮ್ಮ ಮನೆಯ ಫ್ಲಷಿಂಗ್ ಔಟ್ಲೆಟ್ಸ್ ಕಕ್ಕಸ್ಸುಗಳು ಕಟ್ಟಿಸಿರುವುದಿಲ್ಲ ಮನೆ ಮಾಲೀಕರುಗಳು ಕೂಡ್ಲೆ ಡ್ರೈನೇಜು ಸೌಲಭ್ಯವಿರುವ ಜರಂಡಿಗಳಲ್ಲಿ ಫ್ಲಷಿಂಗ್ ಕಕ್ಕಸ್ಸುಗಳನ್ನು ವಗೈರೆ ಕಟ್ಟಿಸಬೇಕಾಗಿ ಕೋರಿಕೆ. ತಪ್ಪಿದರೆ ಕಾನೂನು ರೀತ್ಯಾ ಸೂಕ್ತವಾದ ಕಾರ್ಯಕ್ರಮ ನಡೆಸಲಾಗುತ್ತೆ.

ಎಸ್. ಎಸ್. ಹಿರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು/ಸಿಟಿ ರೇಷನಿಂಗ್
No. R 6 - 81 / 47

1947 ನೇ ಇಸವಿ ಅಕ್ಟೋಬರ್ ಮಾಹೆ 31 ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಮೊಹಲ್ಲಾ ಸಬ್ ಗೋಡ್ನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ

(ಸಹಿ) ಎಂ. ಶ್ರೀನಿವಾಸಲು ನಾಯುಡು
ರೇಷನಿಂಗ್ ಆಫೀಸರ
23-10-47 ಮೈಸೂರು ಸಿಟಿ

Woodlands
From 24-10-47
Dick Tracy vs Crime Inc.
Republic Serial in 15 Chapters
— featuring —
Ralph Byrd, Ralph Morgan
Jan Wiley, Kenneth Hurlan
Michael Owen
— Daily 3 Shows —

Edited, Printed and Published by M. S Krishna Rao at the Satyavadi Press Chamarja Agrahar Mysore.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಮೈಸೂರು

ಅಂಗಡಿ ಸೈಟುಗಳ ಹರಾಜು

ಈ ಕೆಳಗೆ ನಮೂದಿಸಿರುವ ಅಂಗಡಿ ಸೈಟುಗಳನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಬಾಕಿ ವಿವರವನ್ನು ನೋಟ್ಸ್ ನಲ್ಲಿ ತಿಳಿದುಕೊಳ್ಳಬಹುದು.

ಹರಾಜಾಗುವ ಸೈಟುಗಳು	ಹರಾಜು ತಾರೀಖು
1 ಮೋತೀಲಾಲ್ ಟಾಕೀಸ್ ಬಳಿ 8 ಸೈಟುಗಳು	2—11—47 ಬೆಳಿಗ್ಗೆ 10 ಗಂಟೆಗೆ
2 ಒಳ್ಳಂಪಿಯಾ ಟಾಕೀಸ್ ಹತ್ತಿರ 1 ಸೈಟು	3—11—47 ಬೆಳಿಗ್ಗೆ 10 ಗಂಟೆಗೆ

(ಸಹಿ) ಕೆ. ಜಿ. ಕಾಟ್ಟೆ
ಫಾರ್ ಛೇರ್‌ಮೆನ್

ಶ್ರೀ 'ಓಂ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗ ...
ದುದು. ಸ್ಪೆ...
ಸರಿ ಗಿಡಗಳಿಂದ ಅರಿಸಲ್ಪಟ್ಟ ...
ಳಿಂದ ಕಿತ್ತಲ್ಪಟ್ಟು ಆರಿಸ ತೆಗೆಯ...
ಲ್ಪಟ್ಟಿದಾಗಿದೆ. ಇದರಲ್ಲಿ ಏನೆಂ
ದು ಆಕ್ಷೇಪಣೀಯ ಪದಾರ್ಥವೂ
ಸೇರಿಲ್ಲ ಮತ್ತು ಧಾರ್ಮಿಕವಾಗಿ
ಯೂ ಪರಿಶುದ್ಧವಾಗಿದ್ದು, ದೇ
ವಾಲಯಗಳಲ್ಲಿಯೂ ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ
ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಿಗಳಲ್ಲಿಯೂ ಉಪಯೋಗಿಸಲ್ಪಡತ
ದ್ದಾಗಿದೆ. ಎಂದು ಶಿಪಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

At Opera · From 24-10-47
MAD-MAN N.S.Krishnan, T A Maduram